# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿಸಿ ನಂಬರಃ 82/2017

ಫಿಯಾದಿಃ ಸರಕಾರ

- ವಿರುದ್ಧ -

ಆರೋಪಿ ಉಮೇಶ ಈಶ್ವರ ಕೊರಗಶೆಟ್ಟಿ,
ಪ್ರಾಯಃ 36 ವರ್ಷ, ವೃತ್ತಿಃ ಇಲೆಕ್ಟ್ರಿಕಲ್ ಗುತ್ತಿಗೆದಾರ,
ಸಾಃ ಗುಡ್ಡೆಕೊಪ್ಪ, ತೀರ್ಥಹಳ್ಳಿ, ಶಿವಮೊಗ್ಗ

## ದೋಷಾರೋಪಣೆ

ನಾನು ಪ್ರಶಾಂತ ಬಾದವಾಡಗಿ, ಬಿ.ಎ..,ಎಲ್.ಎಲ್.ಬಿ.,(ಸ್ಪೇ) ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ ಆರೋಪಿಯಾದ ನಿನ್ನ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ.

ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಕುಂಬಾರಕೇರಿ, ಕೋಟೆಭಾಗ, ಪುರ್ಲಕ್ಕಿಬೇಣ, ಗಾಬೀತಕೇಣಿ, ಹರಿಕಂತ್ರವಾಡಾ ಕಡೆಗಳಲ್ಲಿ ಎಲ್ ಟಿ ಮಾರ್ಗದ ನವೀಕರಣದ ಕಾಮಗಾರಿಯನ್ನು ಫಿರ್ಯಾದಿ- ಸುದರ್ಶನ ಬಾಲಕೃಷ್ಣ ಪಿಳ್ಳೆ ಇವರು ಇಲೆಕ್ಟ್ರೀಕಲ್ ಉಪ-ಗುತ್ತಿಗೆದಾರನಾದ ಆರೋಪಿತನಾದ ನಿನಗೆ ವಹಿಸಿಕೊಟ್ಟಿದ್ದು, ನೀನು ಕಾಮಗಾರಿಗೆ ಪೂರೈಸಿದ ಸುಮಾರು 4824 ಕೆ.ಜಿ ರಾಬೀಟ ತಂತಿಯನ್ನು ಹಾಗೂ ಇತರೇ ಸಾಮಗ್ರಿಗಳನ್ನು ದಿಃ 27-2-2015 ರ ನಂತರದಲ್ಲಿ ಅಂಕೋಲಾದ ಕುಂಬಾರಕೇರಿ ಮತ್ತು ಪಿ ಎಮ್ ಹೈಸ್ಕೂಲ್ ಕಡೆಗಳಲ್ಲಿನ ಹೆಚ್ ಟಿ /ಎಲ್ ಟಿ ಮಾರ್ಗದ ನವೀಕರಣ ಕಾಮಗಾರಿಗೆ ಉಪಯೋಗಿಸದೇ ಫಿರ್ಯಾದಿಗೆ ನಂಬಿಕೆ ದ್ರೋಹ ಎಸಗಿ ಆ ಮೂಲಕ ಭಾ.ದಂ.ಸಂ.ಕಲಂ 406 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀಯಾ ಅಂತಾ ನಿನ್ನ ಮೇಲೆ ದೋಷಾರೋಪಣೆ ಇರುತ್ತದೆ.

ಎರಡನೇಯದಾಗಿ ಅದೇ ದಿನ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಸುಮಾರು 1250 ಕೆ.ಜಿ ಆಗುವಷ್ಟು ರಾಬೀಟ ತಂತಿಯನ್ನು ನಿನ್ನ ಊರಾದ ತೀರ್ಥಹಳ್ಳಿಗೆ ತೆಗೆದುಕೊಂಡು ಹೋಗಿ ಅದರಲ್ಲಿ ಸುಮಾರು 800 ಕೆ ಜಿ ಆಗುವಷ್ಟು ರಾಬೀಟ ತಂತಿಯನ್ನು ಚಾಸಾ-8 ನಾಗರಾಜ ಫಕೀರಪ್ಪ ಇಳಿಗೇರ ಇವರಿಗೆ ಸುಳ್ಳು ಹೇಳಿ ಮಾರಾಟ ಮಾಡಿದ್ದಲ್ಲದೇ, ಸುಮಾರು 450 ಕೆ. ಜಿ ಆಗುವಷ್ಟು ತಂತಿ ನಿನ್ನಲ್ಲಿ ಇಟ್ಟುಕೊಂಡು ಫಿರ್ಯಾದಿಗೆ ಮೋಸ ವಂಚನೆ ಮಾಡಿ ಆ ಮೂಲಕ ಭಾ.ದಂ.ಸಂ.ಕಲಂ 420 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀಯಾ ಅಂತಾ ನಿನ್ನ ಮೇಲೆ ದೋಷಾರೋಪಣೆ ಇರುತ್ತದೆ.

(ಮೇಲಿನ ಅಪರಾಧಗಳನ್ನು ಆರೋಪಿತರಾದ ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 18-05-2024 ರಂದು ಆದೇಶಿಸುತ್ತೇನೆ.)

Sd/-

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 18-05-2024 ಪ್ರ ದಂ ನ್ಯಾದಂ, ಅಂಕೋಲಾ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 82/2017

ಪಿರ್ಯಾದಿಃ ಸರಕಾರ - ವಿರುದ್ಧ - ಆರೋಪಿ ಉಮೇಶ ಈಶ್ವರ ಕೊರಗಶೆಟ್ಟಿ

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 18-5-2024 ಪ್ರ ದಂ ನ್ಯಾದಂ, ಅಂಕೋಲಾ.

ಆರೋಪಿಯ ಸಹಿ